# ಕಾವ್ಯ, ದೇವರು ಎರಡೂ ವಿಷಯ ಸಂಕೀರ್ಣವಾದವು: ನಾ.ಮೊಗಸಾಲೆ

## ಎಂಪಿಎಂ ಕಾಲೇಜಿನಲ್ಲಿ ಸಾಹಿತ್ಯ ಚಿಂತನೆ, ಅಭಿನಂದನಾ ಕಾರ್ಯಕ್ರಮ

31/08/19

• **ಕನ್ನಡಪ್ರಭ ವಾರ್ತೆ** ಕಾರ್ಕಳ

ಜಗತ್ತಿನಲ್ಲಿ ನನ್ನನ್ನು ಹೆಚ್ಚು ಕಾಡುತ್ತಿರುವ ಎರಡು ವಿಷಯಗಳೆಂದರೆ ಕಾವ್ಯ ಮತ್ತು ದೇವರು. ಇವೆರಡೂ ಸಂಕೀರ್ಣವಾದವುಗಳು. ಅವುಗಳನ್ನು ರೂಪಕಗಳ ಮೂಲಕವಷ್ಟೇ ವಿವರಿಸಬಹುದು ಎಂದು ಡಾ. ನಾ. ಮೊಗಸಾಲೆ ಹೇಳಿದ್ದಾರೆ.

ಅವರು ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಾಹಿತ್ಯ ವೇದಿಕೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಉಡುಪಿ ಜಿಲ್ಲೆಯ ತಾಲೂಕು ಘಟಕವು ಕಾಲೇಜಿನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಮೊಗಸಾಲೆಯವರ ಸಾಹಿತ್ಯ ಚಿಂತನೆ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇವರನ್ನು ಕೇವಲ ಕಲ್ಲಿನಲ್ಲಿ ಪ್ರೀತಿಸಿ, ಅವನಿಗಾಗಿ ಜಗಳವಾಡಬೇಡಿ. ತನ್ನ ಯಶಸ್ಸಿನ ಹಿಂದೆ ಬಹಳಷ್ಟು ವ್ಯಕ್ತಿಗಳಿದ್ದಾರೆ. ನಾನು ಯಶಸ್ವಿಯಾಗಿದ್ದರೆ ಅದು ನನ್ನಿಂದಲ್ಲ, ನನ್ನ ಜತೆಗಾರರಿಂದಾಗಿ ಎಂದರು.

ವಾಗ್ಮಿ ಮುನಿರಾಜ್ ರೆಂಜಾಳ ಮಾತನಾಡಿ, ಮೊಗಸಾಲೆಯವರಿಗೆ ನಾಲ್ಕು ಮುಖಗಳಿವೆ. ಮೊದಲನೆಯದು ಅವರ ವೈದ್ಯ ವೃತ್ತಿ. ಎರಡನೆಯದು ಪ್ರವೃತ್ತಿ ಸಾಹಿತ್ಯ. ಮೂರನೆಯದು ಸಂಘಟನೆ. ಅವರು ಸಂಘಟಿಸಿದ ಕಾಂತಾವರ ಕನ್ನಡ ಸಂಘ, ವರ್ಧಮಾನ ಪೀಠ ಹಾಗೂ ಅಲ್ಲಮಪ್ರಭು ಪೀಠ ಹಾಗೂ ನಾಲ್ಕನೆಯದು ಮೊಗಸಾಲೆ ಹೆಸರಿನಲ್ಲಿ ಕೊಡುವ ಪ್ರಶಸ್ತಿಗಳು ಎಂದರು.

**ಬದಲಾವಣೆಯೇ ಪ್ರಧಾನ ವಸ್ತು:** ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಉಪೇಂದ್ರ ಸೋಮಯಾಜಿ ಅವರು, ಡಾ.ನಾ. ಮೊಗಸಾಲೆ ಕೃತಿಯಾದ ಉಲ್ಲಂಘನೆ ಬಗ್ಗೆ ಮಾತನಾಡಿ, ಲೇಖಕನ ಕಾಲಾನಂತರದಲ್ಲಿಯೂ ಉಳಿಯತಕ್ಕ ಕಾದಂಬರಿಯಿದ್ದರೆ ಅದು ಉಲ್ಲಂಘನೆ. ಜಾಗತೀಕರಣದ ಬದಲಾವಣೆಯೇ ಇದರ ಪ್ರಧಾನ ವಸ್ತು. ಈ ಕಾದಂಬರಿಯು ಪ್ರಾದೇಶಿಕ ಕಥೆ ಎಂಬ ಸಣ್ಣ ಅಂಶಗಳನ್ನು ಒಳಗೊಂಡಿದ್ದರೂ, ಜಾಗತೀಕರಣದ ಪ್ರಭಾವ, ಆರ್ಥಿಕ ಸಂಚಲನ, ನಮ್ಮ ಸಂಸ್ಕೃತಿ, ಸಂಸ್ಕಾರದಲ್ಲಿನ ಬದಲಾವಣೆಗಳನ್ನು ಮನೋಜ್ಞವಾಗಿ ಬಿಂಬಿಸಿದೆ ಎಂದರು.

ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗರು ಸನ್ಮಾನ ಸ್ವೀಕರಿಸಿ, ಮೊಗಸಾಲೆಯವರ ಉಲ್ಲಂಘನೆ ಕೃತಿ ನನಗೆ ಸ್ಫೂರ್ತಿ. ಈ ಕಾದಂಬರಿಯು ಕರಾವಳಿ ಭಾಗದ ಪ್ರಾತಿನಿಧಿಕವಾಗಿ ನಿಲ್ಲುತ್ತದೆ. ಇಲ್ಲಿನ ಪಾತ್ರಗಳು ಸಮಾಜಕ್ಕೆ ಸಂದೇಶ ನೀಡುತ್ತವೆ ಎಂದರು.

ಮೊಗಸಾಲೆ ಅಭಿನಂದನಾ ಕಾರ್ಯಕ್ರಮದ ಅಂಗವಾಗಿ ನಡೆದ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ತೃತೀಯ ಬಿಕಾಂ ವಿದ್ಯಾರ್ಥಿ ಮನೀಷ್, ಗಾಯನ ಸ್ಪರ್ಧೆಯಲ್ಲಿ ಬಹುಮಾನ ಪಡೆದ ದ್ವಿತೀಯ ಕಲಾ ವಿದ್ಯಾರ್ಥಿನಿ ಶ್ರುತಿ ಶಿಂಧೆ ಹಾಗೂ ಸ್ಪರ್ಧೆಯಲ್ಲಿ ಬಹುಮಾನ ಗೆದ್ದ ಇತರ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು.

ಪ್ರಾಂಶುಪಾಲ ಪ್ರೊ. ಶ್ರೀವರ್ಮ ಅಜ್ರಿ, ಕನ್ನಡ ಸಾಹಿತ್ಯ ಪರಿಷತ್ತು ಕಾರ್ಕಳ ಘಟಕದ ಅಧ್ಯಕ್ಷ ಪ್ರಭಾಕರ ಶೆಟ್ಟಿ, ಕಾಲೇಜಿನ ಸಾಹಿತ್ಯ ಸಂಘದ ಕಾರ್ಯದರ್ಶಿ ಸಹಾಯಕ ಪ್ರಾಧ್ಯಾಪಕ ಯೋಗೀಶ್ ಉಪಸ್ಥಿತರಿದ್ದರು.

ಕಾಲೇಜಿನ ವಾಣಿಜ್ಯಶಾಸ್ತ್ರದ ಸಹಾಯಕಿ ಪ್ರಾಧ್ಯಾಪಿಕೆ ಜ್ಯೋತಿ ಎಲ್. ಜನ್ನೆ ಸ್ವಾಗತಿಸಿದರು. ಸಾಹಿತ್ಯ ಪರಿಷತ್ ಸದಸ್ಯ ಗಣೇಶ್ ಕಾರ್ಯಕ್ರಮ ನಿರೂಪಿಸಿದರು.